# ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ

## ಪರೀಕ್ಷಾ ಮಾರ್ಗದರ್ಶಿ

## ಸಮಾಜ ವಿಜ್ಞಾನ KEY POINTS

---

## ಬೋಧನಾಶಾಸ್ತ್ರದ ಮೇಲೆ ಕೇಳಬಹುದಾದ ಪ್ರಮುಖ ಅಂಶಗಳು

---

### ವ್ಯಾಖ್ಯೆಗಳು

- ಇತಿಹಾಸವು ವೈಜ್ಞಾನಿಕ ಅಧ್ಯಯನ ಮತ್ತು ಗತಕಾಲದ ಸಂಪೂರ್ಣ ದಾಖಲೆ ಎಂದವರು – ಘೋಷ (KARTET 2019)

### ಇನ್ನಿತರ ಮೂರು ಆಯ್ಕೆಗಳು

- ಜಾನ್ಸನ್ – ಮನುಕುಲದ ಅನುಭವಗಳ ಗಣಿಯೇ ಇತಿಹಾಸ
- ಮೈಟ್ ಲ್ಯಾಂಡ್ - ವ್ಯಕ್ತಿಗಳು ಮಾಡಿದ, ಹೇಳಿದ ಎಲ್ಲಕ್ಕಿಂತ ಹೆಚ್ಚಾಗಿ ಯೋಚನೆ ಮಾಡಿದ ಕೃತಿ ಹಾಗೂ ವಿಷಯಗಳೆಲ್ಲವೂ ಇತಿಹಾಸ.
- ಹೆಗಲ್ – ಇತಿಹಾಸವು ಆತ್ಮವು ತನ್ನನ್ನು ಮತ್ತು ತನ್ನದೇ ಆದ ಪರಿಕಲ್ಪನೆಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯಾಗಿದೆ.

### ನನ್ನ ಅಂದಾಜಿನಲ್ಲಿ ಇರುವ ವ್ಯಾಖ್ಯೆಗಳು

- ಇತಿಹಾಸವು ಒಂದು ವಿಜ್ಞಾನ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ – ಜೆ.ಬಿ.ಬ್ಯೂರಿ
- ಇತಿಹಾಸವು ಮಹಾನ್ ವೀರರ ಮತ್ತು ಮಹತ್ವಪೂರ್ಣ ಘಟನೆಗಳ ದಾಖಲೆ – ಹೆರೊಡೋಟಸ್
- ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವೇ ಇತಿಹಾಸ - ಕಾರ್ಲ್ ಮಾರ್ಕ್ಸ್
- ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗಿಬಂದ ಮನುಕುಲದ ಕಥೆಯೇ ಇತಿಹಾಸ – ಪಂಡಿತ್ ಜವಾಹರ್ ಲಾಲ್ ನೆಹರು
- ನಾಗರಿಕತೆಗಳ ಏಳುಬೀಳಿನ ಕಥೆಯೇ ಇತಿಹಾಸ – ಅರ್ನಾಲ್ಡ್ ಟಾಯ್ನಾಬಿ
- ಇತಿಹಾಸವು ಶ್ರೇಷ್ಠ ವ್ಯಕ್ತಿಗಳ ಆತ್ಮಕಥೆ – ಥಾಮಸ್ ಕಾರ್ಲೈಲ್


CONTACT FOR ONLINE COACHING CLASSES KARNATAKA ACADEMY 9980877296

- ಗತಕಾಲದ ರಾಜಕೀಯವು ವರ್ತಮಾನ ಕಾಲದ ಚರಿತ್ರೆ ವರ್ತಮಾನಕಾಲದ ರಾಜಕೀಯವು ಭವಿಷ್ಯತ್ತಿನ ಚರಿತ್ರೆ – ಫ್ರೀಮನ್
- ಹಿಂದಿನ ಮತ್ತು ಇಂದಿನ ಕಾಲಗಳ ನಡುವಿನ ನಿರಂತರವಾಗಿ ನಡೆಯುತ್ತಿರುವ ಸಂಭಾಷಣೆ ಇತಿಹಾಸ – ಇ. ಹೆಚ್. ಕಾರ್
- ಇತಿಹಾಸವು ಸಮಾಜಗಳ ನೆನಪುಗಳು – ಪ್ರೋ// ರೀನಿಯರ್
- ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು – ಡಾ// ಬಿ.ಆರ್. ಅಂಬೇಡ್ಕರ್
- ಮಾನವಕುಲದ ಕಥೆಯೇ ಇತಿಹಾಸ - ಹೆನ್ರಿ ವಾನ್ ಲೂನ್
- ಇತಿಹಾಸವು ಗತಕಾಲದ ಅನುಭವಗಳ ಅಭಿನಯವಾಗಿದೆ – ಕಾಲಿಂಗ್ ವುಡ್
- ವ್ಯಕ್ತಿಗೆ ನೆನಪು ಇದ್ದಂತೆ ಮನುಕುಲಕ್ಕೆ ಇತಿಹಾಸ – ಹೇಸ್ ಮತ್ತು ಮೂನ್
- ವಿವಿಧ ಕಾಲಘಟ್ಟಗಳಲ್ಲಿ ಮಾನವನು ಹೇಗಿದ್ದ ? ಎಂಬುದರ ವೈಜ್ಞಾನಿಕ ಅಧ್ಯಯನವೇ ಇತಿಹಾಸ – ಮಾರ್ಕ್ ಬ್ಲೋಚ್
- ಫ್ರಾಯ್ಡ್ – ಸತ್ಯ ಅಸತ್ಯತೆಯ ಸತ್ವವನ್ನು ಯುಗ ಯುಗಾಂತರಗಳಿಂದ ಪ್ರತಿ ಧ್ವನಿಸುವ ಪಂಚಾಮೃತವೇ ಇತಿಹಾಸ.

## ಇನ್ನಿತರ ವಿಷಯದ ಮೇಲಿನ ವ್ಯಾಖ್ಯೆಗಳು

- ವಿದ್ಯಾರ್ಥಿಗಳ ಕಲಿಕೆಯ ನ್ಯೂನ್ಯತೆಗಳನ್ನು ವೈಜ್ಞಾನಿಕವಾಗಿ ಪತ್ತೆ ಹಚ್ಚುವ ಕ್ರಮವೇ ನೈದಾನಿಕ ಪರೀಕ್ಷೆ ಈ ವ್ಯಾಖ್ಯಾನವನ್ನು ನೀಡಿದವರು – ಗುಡ್
- ಮಕ್ಕಳ ಬೌದ್ಧಿಕ, ದೈಹಿಕ, ಸಾಮಾಜಿಕ ಅಭಿವೃದ್ಧಿ, ಅಭಿವೃದ್ಧಿ, ಅರ್ಹತೆ ಮತ್ತು ಒಲವು ಮುಂತಾದವುಗಳನ್ನು ಒಟ್ಟಾರೆಯಾಗಿ ಅಳೆಯುವ ಪ್ರಕ್ರಿಯೆ ಮೌಲ್ಯಮಾಪನ ಈ ವ್ಯಾಖ್ಯೆಯನ್ನು ನೀಡಿದವರು – ರೈಲೆನ್ ಮತ್ತು ಹುನ್ನಾರ್
- ಶಾಲೆಯ ಎರಡು ಅಥವಾ ಎರಡಕ್ಕಿಂತ ಹೆಚ್ಚು ವಿಷಯಗಳ ವಿಷಯಾಂಶಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಮಗುವಿನ ಅನುಭವದ ಮೊತ್ತವನ್ನು ಹೆಚ್ಚಿಸಲು ಪರಸ್ಪರ ಸಮೀಪ ತರುವ ಇಲ್ಲವೇ ಸಮನ್ವಯಗೊಳ್ಳುವಂತೆ ಮಾಡುವ ಪ್ರಯತ್ನವೇ ಸಹಸಂಬಂಧ – ಸಿ.ವಿ.ಗುಡ್


CONTACT FOR ONLINE COACHING CLASSES KARNATAKA ACADEMY 9980877296
KARNATAKA ACADEMY 9980877296

# ಕಾಲ, ಸ್ಥಳ ಪ್ರಜ್ಞೆ, ಕಾಲಗಣನೆ ಮತ್ತು ಸಹಸಂಬಂಧದ ಮೇಲೆ ಕೇಳಬಹುದಾದ ಪ್ರಶ್ನೆಗಳು

## KARTET – 2019

- ಕಾಲ ಸ್ಥಳ ಮತ್ತು ಸಮಾಜದ ಪ್ರಜ್ಞೆಯನ್ನು ಮೂಡಿಸುವ ವಿಷಯ – ಇತಿಹಾಸ
- ವಿದ್ಯಾರ್ಥಿಗಳಲ್ಲಿ ಸ್ಥಳದ ಸಂಬಂಧವನ್ನು ವೃದ್ಧಿಗೊಳಿಸಲು ಸಹಾಯ ಮಾಡುವ ಸಾಧನ – ಭೂಪಟಗಳು
- ವಿದ್ಯಾರ್ಥಿಗಳಲ್ಲಿ ಕಾಲ ಮತ್ತು ಸ್ಥಳದ ಬಗ್ಗೆ ಪ್ರಜ್ಞೆಯನ್ನು ವೃದ್ಧಿಸಲು ಇತಿಹಾಸವನ್ನು ಈ ವಿಷಯದೊಂದಿಗೆ ಸಹಸಂಬಂಧಿಕರಿಸಬೇಕು – ಭೂಗೋಳಶಾಸ್ತ್ರ
- ಇತಿಹಾಸ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕಾಲ ಪ್ರಜ್ಞೆಯನ್ನು ಬೆಳೆಸಲು ಬೋಧನೋಪಕರಣಗಳನ್ನು ಬಳಸುವುದು – ಕಾಲರೇಖೆ

## ನನ್ನ ಅಂದಾಜು ಗಣನೆಯಲ್ಲಿರುವ ಅಂಶಗಳು

- ಐತಿಹಾಸಿಕ ಘಟನೆ ಹಾಗೂ ಘಟನೆ ನಡೆದ ಸ್ಥಳದ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ವೇ - ಸ್ಥಳ ಪ್ರಜ್ಞೆ
- ಐತಿಹಾಸಿಕ ಘಟನೆಗಳನ್ನು ಕಾಲಾನುಕ್ರಮದಲ್ಲಿ ವ್ಯವಸ್ಥಿತವಾಗಿ ಗುರುತಿಸಿದರೆ ಅಂತಹ ಕಾಲರೇಖೆ - ಪ್ರಗತಿಶೀಲ ಕಾಲರೇಖೆ
- ಜಾನ್ಸನ್ ರವರ ಪ್ರಕಾರ ಇತಿಹಾಸದ ಎರಡು ಕಣ್ಣುಗಳು
  1. ಕಾಲಗಣನಾಶಾಸ್ತ್ರ
  2. ಭೂಗೋಳ
- ಸಹಸಂಬಂಧದ ಪಿತಾಮಹ – ಫ್ರಾನ್ಸಿಸ್ ಗಾಲ್ಟನ್
- ವರ್ತಮಾನ ಅಥವಾ ಗೊತ್ತಿರುವ ಅಥವಾ ಪರಿಚಿತವಾಗಿರುವ ಘಟನೆಯಿಂದ ಹಿಂದಕ್ಕೆ ಅಂದರೆ ಕಾಲ ರೇಖೆಯಲ್ಲಿ ಹಿಮ್ಮುಖವಾಗಿ ಗುರುತಿಸುತ್ತಾ ಹೋಗುವುದು - ಪ್ರತಿಗಾಮಿ ಕಾಲರೇಖೆ.

KARNATAKA ACADEMY 9980877296

- ಇತಿಹಾಸವನ್ನು ಇತರ ವಿಷಯಗಳೊಂದಿಗೆ ಅನು ಬಂಧಿಸಲು ಪೂರ್ವನಿಯೋಜಿತ ಕಾರ್ಯಕ್ರಮ ವಿಲ್ಲದೆ ಸಾಂದರ್ಭಿಕವಾಗಿ ಇತಿಹಾಸದೊಂದಿಗೆ ಇತರ ವಿಷಯಗಳನ್ನು ಅನುಬಂಧಿಸುವುದು - ಆಕಸ್ಮಿಕ ಅಥವಾ ಪ್ರಾಸಂಗಿಕ ಸಹಸಂಬಂಧ
- ಇತಿಹಾಸವನ್ನು ಒಂದು ವಿಷಯ ದೊಡನೆ ಯಾವ ಮಟ್ಟದಲ್ಲಿ ಅನು ಬಂಧಿಸಬೇಕು ಎನ್ನುವ ಪೂರ್ವನಿಯೋಜಿತ ಕಾರ್ಯಕ್ರಮವೇ - ಕ್ರಮಬದ್ಧ ಅಥವಾ ವ್ಯವಸ್ಥಿತ ಸಹಸಂಬಂಧ
- ಇತಿಹಾಸದ ಒಂದು ಘಟಕಕ್ಕೂ ಅದಕ್ಕೂ ಮೊದಲೇ ಬೋಧಿಸಲ್ಪಟ್ಟ ಘಟಕ ದೊಡನೆ ಅನು ಬಂಧಿಸುವುದು - ಸಮ ಕೇಂದ್ರಿತ ಸಹಸಂಬಂಧ
- ಇತಿಹಾಸ ಮತ್ತು ಭೂಗೋಳದ ಸ್ವರೂಪವನ್ನು " ಭೂಮಿಯ ವಿವರಣೆಯನ್ನು ಅಭ್ಯಸಿಸುವುದು ಭೂಗೋಳ" ಎಂದು ಹೇಳಿದವರು – ಇಮ್ಯಾನ್ಯುಯಲ್ ಕಾಂಟ್
- ಪ್ರತಿಗಾಮಿ ಪದ್ಧತಿಯನ್ನು ಲೋಲಕ ಪದ್ಧತಿ ಎಂದು ಕರೆದವರು – ಡಾ.ವ್ಹಿ.ಡಿ.ಘಾಟೆ
- ಜೋಡನಾ ವಿಧಾನವನ್ನು ರೂಪಿಸಿದವರು – ಮಿಸ್ ಮೆಜೊರಿಯಾ ರೀವ್ಸ್ ರವರು
- ಪುರೋಗಾಮಿ ಪದ್ಧತಿ ಎಂದರೆ

  ಕಾಲಾನುಕ್ರಮ ಪದ್ಧತಿಯಲ್ಲಿ ಯ ತೊಡಕುಗಳನ್ನು ಹೋಗಲಾಡಿಸಲು ಪುರೋಗಾಮಿ ಪದ್ಧತಿಯನ್ನು ಜಾರಿಗೆ ತರಲಾಯಿತು.

  ಪುರೋಗಾಮಿ ಪದ್ಧತಿಯ ಪಿತಾಮಹ – ಕೊಮೆನಿಯಸ್
- ಇತಿಹಾಸವು ಕಾಲಕ್ಕೆ ಸಂಬಂಧಿಸಿದ ಒಂದು ಮತ್ತೊಂದರ ಮೂಲವನ್ನು ಅನುಸರಿಸಿದ ಸಂಗತಿಗಳ ವರದಿಯಾಗಿದೆ ಎಂದು ಹೇಳಿದವರು – ಇಮ್ಯಾನುಯೆಲ್ ಕಾಂಟ್
- ರಾಜ್ಯಶಾಸ್ತ್ರ ವಿಲ್ಲದ ಇತಿಹಾಸಕ್ಕೆ ಫಲವಿಲ್ಲ, ಇತಿಹಾಸವಿಲ್ಲದ ರಾಜ್ಯಶಾಸ್ತ್ರಕ್ಕೆ ಬೇರಿಲ್ಲ – ಸುಲೇ
- ವಿದ್ಯಾರ್ಥಿಗಳಲ್ಲಿ ಸ್ಥಳದ ಸಂಬಂಧವನ್ನು ವೃದ್ಧಿಗೊಳಿಸಲು ಸಹಾಯ ಮಾಡುವ ಸಾಧನ – ಭೂಪಟಗಳು

KARNATAKA ACADEMY 9980877296

## ಬೋಧನಾ ವಿಧಾನಗಳು

## KARTET 2019

- ಯೋಜನಾ ವಿಧಾನದ ಕಡೆಯ ಹಂತವೆಂದರೆ - ಯೋಜನೆಯನ್ನು ದಾಖಲಿಸುವುದು
- ಸಮಸ್ಯೆ ಪರಿಹಾರ ವಿಧಾನದ ಮೊದಲ ಹಂತ - ಸಮಸ್ಯೆಯನ್ನು ಗುರುತಿಸುವುದು
- ಯೋಜನಾ ವಿಧಾನವನ್ನು ಅಭಿವೃದ್ಧಿಪಡಿಸಿ ಮತ್ತು ಪರಿಪೂರ್ಣಗೊಳಿಸಿದವರು – ಕಿಲ್ ಪ್ಯಾಟ್ರಿಕ್
- ತಮ್ಮ ಸ್ಥಳ, ಪರ್ವತಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಗೌರವವನ್ನು ವೃದ್ಧಿಸಲು ಸಹಾಯಮಾಡುವ ಭೂಗೋಳಶಾಸ್ತ್ರದ ಬೋಧನಾ ವಿಧಾನ - ಪ್ರಾಂತೀಯ ವಿಧಾನ
- ಸಮಾಜ ವಿಜ್ಞಾನ ವಿಷಯವನ್ನು ನಿರಂತರ ವೃತ್ತವಾಗಿ ವ್ಯವಸ್ಥೆಗೊಳಿಸುವ ವ್ಯವಸ್ಥೆ - ಏಕ ಕೇಂದ್ರಿತ ಮಾರ್ಗ
- ಸ್ಪರ್ಧಾತ್ಮಕ ಸಹಕಾರ, ಒಪ್ಪಂದ ಮತ್ತು ನಿರ್ದೇಶಿತ ಉದ್ದೇಶಗಳನ್ನು ಹೊಂದಿರುವ ಬೋಧನಾ ವಿಧಾನ - ಚರ್ಚಾ ವಿಧಾನ
- ಕ್ರಮಾನುಗತ ಬೋಧನೆಯ ಮೂಲ ತತ್ವಗಳನ್ನು ರೂಪಿಸಿದ ಪರಿಣಿತ ಶಾಸ್ತ್ರಜ್ಞ – ಬಿ.ಎಫ್. ಸ್ಕಿನ್ನರ್
- ಒಂದು ಒಳ್ಳೆಯ ಯೋಜನೆ ಒಳಗೊಂಡಿರಬೇಕಾಗಿರುವುದು –
    1. ಉತ್ತಮ ಶೈಕ್ಷಣಿಕ ಅನುಭವ
    2. ಲಭ್ಯವಿರುವ ಸಂಪನ್ಮೂಲಗಳ ಬಳಕೆ
- ಜೀವನ ಚರಿತ್ರೆ ಬೋಧನಾ ವಿಧಾನದ ಮುಖ್ಯ ಉದ್ದೇಶ - ವಿವಿಧ ಚಾರಿತ್ರಿಕ ವ್ಯಕ್ತಿಗಳಂತೆ ತಾವು ಸಾಧನೆ ಮಾಡಲು ಸ್ಪೂರ್ತಿ ಮೂಡಿಸುವುದು.
- ಇತಿಹಾಸವು ಹಲವಾರು ಮಹಾ ನಾಯಕರುಗಳು ಹಾಗೂ ವಿಶೇಷ ಘಟನೆಗಳನ್ನು ಮುಂದಿನ ಪೀಳಿಗೆಗೆ ಸ್ಮರಿಸಲು ಇರುವ ಒಂದು ದಾಖಲೆ ಹಾಗಿದ್ದಲ್ಲಿ ಇತಿಹಾಸ ಬೋಧನೆಯ ಉತ್ತಮ ಬೋಧನಾ ವಿಧಾನ - ಜೀವನ ಚರಿತ್ರ ಪದ್ಧತಿ
- ಇತ್ತೀಚಿನ ದಿನಗಳಲ್ಲಿ ಉಪನ್ಯಾಸ ವಿಧಾನ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ ಇದನ್ನು ಸುಧಾರಿಸಲು ಉಪನ್ಯಾಸಕರು ಈ ಕ್ರಮವೂ ಅನುಸರಿಸಬಹುದು - ವಿವಿಧ

KARNATAKA ACADEMY 9980877296

ಘಟನೆಗಳು, ಉದಾಹರಣೆಗಳು, ಅನುಭವಗಳು ಹಾಗೂ ಚರ್ಚೆ ಇತ್ಯಾದಿಗಳನ್ನು ವೃದ್ಧಿಸುವುದು.

- ಸಮಾಜ ವಿಜ್ಞಾನವನ್ನು ಬೋಧಿಸಲು ಬಳಸುವ ಈ ಬೋಧನಾ ವಿಧಾನದ ಸನ್ನಿವೇಶವನ್ನು ಒದಗಿಸಿಕೊಡಲಾಗುವುದು - ಯೋಜನಾ ಪದ್ಧತಿ

## ಇನ್ನಿತರ ಅಂಶಗಳು

- ಏಕಕೇಂದ್ರಿಯ ಪದ್ಧತಿ - ಇತಿಹಾಸ ವಿಷಯವಸ್ತುವನ್ನು ಕಾಲಾನುಕ್ರಮದಲ್ಲಿ ವಿಂಗಡಿಸದೆ ಇಡಿಯಾಗಿ ಸಂಘಟಿಸುವುದು.
- ಕಾಲಾನುಕ್ರಮ ಪದ್ಧತಿ - ಇತಿಹಾಸವನ್ನು ಪ್ರಾಚೀನ,ಮಧ್ಯಕಾಲೀನ ಮತ್ತು ಆಧುನಿಕ ಪದ್ಧತಿಯಾಗಿ ವಿಂಗಡಿಸಿ ವಿಷಯ ಸಂಘಟನೆಯನ್ನು ಮಾಡುವುದು.

## ಕಥಾ ನಿರೂಪಣಾ ಪದ್ಧತಿ

- ಚಿಕ್ಕ ಮಕ್ಕಳಿಗೆ ಬೋಧನೆ ಉಪಯುಕ್ತತೆಯನ್ನು ತಿಳಿಸುವಾಗ ಕಥಾ ನಿರೂಪಣೆಯನ್ನು ಉಪಯೋಗಿಸುವುದು ಯೋಗ್ಯ ಎಂದು ಸಲಹೆ ನೀಡಿದರು – ಪ್ಲೇಟೋ

## ಯೋಜನಾ ಪದ್ಧತಿ

- ಯೋಜನಾ ಪದ್ಧತಿಯು ಮಾಡುತ್ತಾ ಕಲಿ ತತ್ವವನ್ನು ಆಧರಿಸಿದೆ.
- ಯಾವ ವಿಧಾನವು ಅಥವಾ ಬೋಧನಾ ಪದ್ಧತಿಯು ಸಿದ್ಧತೆಯ ನಿಯಮ, ಅಭ್ಯಾಸ ನಿಯಮ ಮತ್ತು ಪರಿಣಾಮ ನಿಯಮಗಳನ್ನು ಒಳಗೊಂಡಿದೆ ಎಂದು ಕೇಳಿದರೆ ಅದು ಯೋಜನಾ ಪದ್ಧತಿ.

---

ಯೋಜನಾ ಪದ್ಧತಿಯ ಪಿತಾಮಹ ಕಿಲ್ ಪ್ಯಾಟ್ರಿಕ್

---

- ಯೋಜನಾ ಪದ್ಧತಿಯ ಜಾನ್ ಡುಯಿ ಅವರ ಪ್ರಗತಿ ವಾದದ ಫಲವಾಗಿದೆ.
- ಕಿಲ್ ಪ್ಯಾಟ್ರಿಕ್ ರವರ ಪ್ರಕಾರ - ಸಾಮಾಜಿಕ ಪರಿಸರದಲ್ಲಿ ನಡೆಯುವ ತುಂಬು ಹೃದಯದ ಉದ್ದೇಶಪೂರಿತ ಚಟುವಟಿಕೆಯೇ ಯೋಜನೆ ಎಂದಿದ್ದಾರೆ.



KARNATAKA ACADEMY 9980877296

## ಯೋಜನಾ ವಿಧಾನದ ತತ್ವಗಳು

1. ಉದ್ದೇಶ ತತ್ವ
2. ಚಟುವಟಿಕೆಯ ತತ್ವ
3. ನೈಜತೆಯ ತತ್ವ
4. ಅನುಭವ ತತ್ವ
5. ಉಪಯುಕ್ತತೆಯ ತತ್ವ

## ಯೋಜನಾ ಪದ್ಧತಿಯ ಹಂತಗಳು ಅಥವಾ ಮೆಟ್ಟಿಲುಗಳು

1. ಸನ್ನಿವೇಶದ ಒದಗಿಸುವುದು (ಪರೀಕ್ಷೆಯಲ್ಲಿ ಕೇಳುತ್ತಾರೆ ಎಚ್ಚರಿಕೆ)
2. ಯೋಜನೆಯ ಆಯ್ಕೆ
3. ಉದ್ದೇಶಿಸುವುದು
4. ಯೋಜಿಸುವುದು
5. ಕಾರ್ಯಾಚರಣೆ
6. ಮೌಲ್ಯಮಾಪನ
7. ದಾಖಲೆ ಮಾಡುವುದು (ಪರೀಕ್ಷೆಯಲ್ಲಿ ಕೇಳುತ್ತಾರೆ ಎಚ್ಚರಿಕೆ)

## ಪಠ್ಯಪುಸ್ತಕ ಪದ್ಧತಿ

ಇತಿಹಾಸವನ್ನು ಪಠ್ಯ ಪುಸ್ತಕದ ಸಹಾಯದಿಂದ ಬೋಧಿಸುವ ಪದ್ಧತಿಯನ್ನು ಪಠ್ಯಪುಸ್ತಕ ಪದ್ಧತಿ ಎನ್ನುವರು.

## ಚರ್ಚಾ ವಿಧಾನ

ಬೇರೆಯವರ ಅಭಿಪ್ರಾಯಗಳನ್ನು ತೂಗಿ ನೋಡುವ ಮತ್ತು ಅವುಗಳನ್ನು ಹಂಚಿಕೊಳ್ಳುವುದು ಹಾಗೂ ಸಾಮೂಹಿಕ ನಿರ್ಧಾರ ಕೈಗೊಳ್ಳುವುದು ಚರ್ಚಾ ವಿಧಾನವಾಗಿದೆ.

KARNATAKA ACADEMY 9980877296

## ಯಶಸ್ವಿ ಚರ್ಚೆಯ ಪ್ರಮುಖ ಭಾಗಗಳು (ಪರೀಕ್ಷೆಯಲ್ಲಿ ಕೇಳಬಹುದಾಗಿದೆ)

1. ಮುಖಂಡ
2. ಗುಂಪು
3. ಸಮಸ್ಯೆ
4. ವಿಷಯ ವಸ್ತು
5. ಮೌಲ್ಯಮಾಪನ

## ಚರ್ಚಾ ವಿಧಾನದ ಪ್ರಕಾರಗಳು

I. ಅನೌಪಚಾರಿಕ ಸಮೂಹ ಯೋಜನೆ (ದುಂಡುಮೇಜಿನ ಪರಿಷತ್)

II. ಔಪಚಾರಿಕ ಸಮೂಹ ಯೋಜನೆ

- ಚರ್ಚಾಗೋಷ್ಠಿ
- ವಿಚಾರ ಸಂಕಿರಣ
- ಕಾರ್ಯಗಾರ

## ಸಮಸ್ಯಾ ಪರಿಹಾರ ವಿಧಾನ

ಸಿ.ವಿ.ಗುಡ್ - ಪರಿಹಾರವನ್ನು ಬಯಸುವ ಆಹ್ವಾನವನ್ನು ರೂಪಿಸಿ ಕಲಿಕೆಯನ್ನು ಪ್ರೋತ್ಸಾಹಿಸುವ ವಿಧಾನವೇ ಸಮಸ್ಯೆ ಪರಿಹಾರ ವಿಧಾನ.

## ಸಮಸ್ಯೆ ಪರಿಹಾರ ವಿಧಾನದ ಹಂತಗಳು

1. ನಿರ್ದಿಷ್ಟ ವಿಷಯವನ್ನು ಆಯ್ಕೆ ಮಾಡುವುದು ಮತ್ತು ಪ್ರಂಶಸಿಸುವುದು
2. ಸಮಸ್ಯೆಯ ಸ್ಪಷ್ಟೀಕರಣ
3. ವಸ್ತುನಿಷ್ಠ ವಿಷಯ ಸಂಗ್ರಹಣೆ
4. ಮಾಹಿತಿಗಳ ಸಂಘಟನೆ
5. ಸಮಸ್ಯೆಯ ಪರಿಹಾರಕ್ಕೆ ನಿರ್ಣಯಗಳನ್ನು ರೂಪಿಸುವುದು
6. ಸಮಸ್ಯೆಗೆ ಪರಿಹಾರ

KARNATAKA ACADEMY 9980877296

## ಪ್ರಾತ್ಯಕ್ಷಿಕೆ ವಿಧಾನ

- ಈ ವಿಧಾನದ ಮೂಲ ಉದ್ದೇಶ - ಯಾವುದೊಂದು ವಿಷಯವನ್ನಾದರೂ ಚೆನ್ನಾಗಿ ತಿಳಿಯುವಂತೆ ಮಾಡುವುದು.
- ಇದನ್ನು ಧ್ಯೇಯನಿಷ್ಠ ಪದ್ಧತಿ ಎನ್ನುವರು
- ಉದಾಹರಣೆ - ಅಣುಕು ಮಂಡಲ ಪಂಚಾಯತಿ ಸಭೆ, ನಗರಸಭೆ, ವಿಧಾನಸಭೆ,ಲೋಕಸಭೆ ಮತ್ತು ವಿಶ್ವ ಸಂಸ್ಥೆಗಳನ್ನು ತರಗತಿಯಲ್ಲಿ ಪ್ರದರ್ಶಿಸಬಹುದು.

### ಪ್ರಾತ್ಯಕ್ಷಿಕ ವಿಧಾನದ ಹಂತಗಳು

1. ಪ್ರಾತ್ಯಕ್ಷಿಕೆಗಾಗಿ ಸಿದ್ಧತೆ
2. ಪ್ರಾತ್ಯಕ್ಷಿಕೆ
3. ಪರಿಣಾಮಗಳ ನಿರೀಕ್ಷಣೆ

## ಹೊರಸಂಚಾರ ವಿಧಾನ

- ವಿದ್ಯಾರ್ಥಿ ಶಾಲಾ ಹೊರಗಡೆ ಪ್ರದೇಶಗಳಿಗೆ ಭೇಟಿ ನೀಡಿ ಪ್ರತ್ಯಕ್ಷ ಮಾಹಿತಿಯನ್ನು ಪಡೆಯುವ ಗುರಿ ಹೊಂದಿದೆ.

## ಅನುಗಮನ ವಿಧಾನ

- ಅನುಗಮನ ವಿಧಾನ ಪ್ರತಿಪಾದಕರು – ಫ್ರಾನ್ಸಿಸ್ ಬೇಕನ್
- ಒಂದು ನಿರ್ದಿಷ್ಟ ವಿಷಯದಲ್ಲಿ ಇರುವ ಅಥವಾ ಉದಾಹರಣೆ ಗಳಲ್ಲಿರುವ ಸಾಮಾನ್ಯ ನಿಯಮವನ್ನು ಹುಡುಕುವುದು ಅಥವಾ ಬಹಿರಂಗಪಡಿಸುವುದು.

## ಅನುಗಮನ ವಿಧಾನದ ತತ್ವಗಳು

- ನಿರ್ದಿಷ್ಟ ದೃಷ್ಟಾಂತದಿಂದ ಸಾರ್ವತ್ರಿಕ ತತ್ವದ ಕಡೆಗೆ
- ಮೂರ್ತದಿಂದ ಅಮೂರ್ತದ ಕಡೆಗೆ
- ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ
- ಉದಾಹರಣೆಯಿಂದ ತತ್ವದ ಕಡೆಗೆ

KARNATAKA ACADEMY 9980877296

## ಅನುಗಮನ ವಿಧಾನದ ಹಂತಗಳು

1. ಗೊತ್ತಿರುವ ವಿಷಯಗಳ ಸಂಗ್ರಹ
2. ಪ್ರಯೋಗಗಳನ್ನು ಮಾಡಿ ನೋಡುವುದು
3. ವ್ಯಾಖ್ಯೆಯನ್ನು ನಿರೂಪಿಸುವುದು
4. ಪರೀಕ್ಷಿಸುವುದು
5. ದೃಢೀಕರಿಸುವುದು

## ನಿಗಮನ ವಿಧಾನ

- ನಿಗಮನ ಪದ್ಧತಿಯ ಪಿತಾಮಹ ಅರಿಸ್ಟಾಟಲ್
- ನಿಗಮನ ಎಂದರೆ ಒಂದು ವಿಚಾರದಿಂದ ಮುಂದಕ್ಕೆ ಹೋಗು ಎಂದರ್ಥ.
- ಈ ವಿಧಾನದಲ್ಲಿ ಸಾರ್ವತ್ರಿಕ ದಿಂದ ನಿರ್ದಿಷ್ಟ ಕ್ಕೆ ಬರುವುದಾಗಿದೆ

## ನಿಗಮನ ವಿಧಾನದ ತತ್ವಗಳು

1. ಸಾಮಾನ್ಯ ತತ್ವಗಳಿಂದ ನಿರ್ದಿಷ್ಟ ತತ್ವದ ಕಡೆಗೆ
2. ಅಮೂರ್ತದಿಂದ ಮೂರ್ತದ ಕಡೆಗೆ
3. ಗೊತ್ತಿಲ್ಲದ್ದರಿಂದ ಗೊತ್ತಿರುವ ಕಡೆಗೆ

## ನಿಗಮನ ವಿಧಾನದ ಹಂತಗಳು

1. ಸಮಸ್ಯೆಯನ್ನು ತಿಳಿದುಕೊಳ್ಳುವುದು
2. ವಿಷಯ ಮಾಹಿತಿಯ ಸಂಗ್ರಹಣೆ
3. ಪರಿಶೀಲನೆ
4. ನಿಯಮಗಳ ಅನ್ವಯ
5. ತಾಳೆ ನೋಡುವುದು

## ವಿವರಣ ವಿಧಾನ

- ಸಮಾಜ ವಿಜ್ಞಾನದ ವಿಷಯಗಳನ್ನು ಸರಳ ಮತ್ತು ಸ್ಪಷ್ಟವಾದ ಭಾಷೆಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸುವುದು.

KARNATAKA ACADEMY 9980877296

## ಮೌಲ್ಯಾಂತರ್ಗತ ವಿಧಾನ

- ವಿ.ಕೃ ಗೋಕಾಕ್ ಅವರು ಈ ಕೆಳಗಿನ ಮೌಲ್ಯಗಳನ್ನು ತಿಳಿಸಿದ್ದಾರೆ
    1) ಸತ್ಯ
    2) ಸದಾಚಾರ
    3) ಪ್ರೇಮ
    4) ಶಾಂತಿ
    5) ಅಹಿಂಸೆ

## ಕೊಠಾರಿ ಕಮಿಷನ್ ಪ್ರಕಾರ

ಜ್ಞಾನಾಭಿವೃದ್ಧಿ ವಿಜ್ಞಾನದಲ್ಲಿ ಬೆಳವಣಿಗೆಯು ಹಾಗೂ ಆಧುನಿಕ ಸಮಾಜದ ವ್ಯವಸ್ಥೆಯು ಸಮಾಜದ ಜವಾಬ್ದಾರಿಯನ್ನು ಒಳಹೊಕ್ಕುವ ಹಾಗೂ ಬಲಪಡಿಸುವ ಅರಿವನ್ನು ಒಳಗೊಂಡಿರಬೇಕು. ಮತ್ತು ಉತ್ಸುಕ ಪ್ರಶಂಸೆಯ ನೀತಿಯ ಹಾಗೂ ಬೌದ್ಧಿಕ ಮೌಲ್ಯಗಳನ್ನು ಒಳಗೊಂಡಿರಬೇಕು ಎಂದು ಹೇಳಿದೆ.

## ರಾಷ್ಟ್ರೀಯ ಶಿಕ್ಷಣ ನೀತಿ 1986

ಜನತೆ ಜೀವನದ ಎಲ್ಲಾ ಹಂತಗಳಲ್ಲಿ ಮೌಲ್ಯ ನಷ್ಟ ಸ್ಥಿತಿಯು ಅವರಲ್ಲಿ ಮಾನಸಿಕ ಕ್ಷೋಭೆಗೆ ಕಾರಣವಾಗಿದೆ.

## ಮೌಲ್ಯಾಂತರ್ಗತ ಬೋಧನಾ ವಿಧಾನದ ಹಂತಗಳು

1. ಪ್ರತ್ಯಕ್ಷ ವಿಧಾನ
2. ಪರೋಕ್ಷ ವಿಧಾನ
3. ಪ್ರಾಸಂಗಿಕ ವಿಧಾನ
4. ಹಂಚಿಕ ಕಾರ್ಯ
5. ಉದಾಹರಣೆಗಳೊಂದಿಗೆ
6. ಬಾಹ್ಯ ಒತ್ತಡ


CONTACT FOR ONLINE COACHING CLASSES KARNATAKA ACADEMY 9980877296

## ಉಪನ್ಯಾಸ ವಿಧಾನ

- ಸಾಂಪ್ರದಾಯಿಕ ಪದ್ಧತಿಯಾಗಿದೆ
- ಪಾಠಪ್ರವಚನ ವಿಧಾನ ಎಂದು ಕರೆಯುತ್ತಾರೆ.
- ಶಿಕ್ಷಕ ಒಂದು ನಿರ್ದಿಷ್ಟ ವಿಷಯವನ್ನು ಯೋಜಿತ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಆ ವಿಷಯದ ಬಗ್ಗೆ ವಿವರಣೆ, ವರ್ಣನೆ, ಉದಾಹರಣೆ, ಹೋಲಿಕೆ ಸ್ಪಷ್ಟೀಕರಣ ಗಳೊಂದಿಗೆ ಹೇಳುವುದನ್ನು ಉಪನ್ಯಾಸ ಎನ್ನುವರು.

## ಮೂಲಾಧಾರ ಪದ್ಧತಿ

ಕೆ.ಡಿ.ಘೋಷ - ಮೂಲದರ ಪದ್ಧತಿಯು ಎಚ್ಚರಿಕೆಯ ನಿರೀಕ್ಷಣೆ, ನಿರ್ಣಯ ಮತ್ತು ವಿಚಾರ ನಿರೂಪಣೆ ಮೊದಲಾದವುಗಳಲ್ಲಿ ಮಾನಸಿಕ ತರಬೇತಿಯನ್ನು ವಿದ್ಯಾರ್ಥಿಗಳಿಗೆ ನೀಡುತ್ತದೆ.

- ವಿದ್ಯಾರ್ಥಿಗಳಿಂದ ಐತಿಹಾಸಿಕ ಮೂಲ ಆಕರಗಳು ಸಂಶೋಧನೆ ಮಾಡಲ್ಪಡುವವಂತಹ ವಿಧಾನವೇ ಮೂಲಾಧಾರ ಪದ್ಧತಿ.

## ಜೀವನ ವೃತ್ತಾಂತ ಪದ್ಧತಿ

- ಪ್ರತಿಪಾದಕರು ಕಾರ್ಲೈಲ್
- ವಿದ್ಯಾರ್ಥಿಗಳಿಗೆ ಜೀವನಚರಿತ್ರೆಯನ್ನು ಬೋಧಿಸಬೇಕೆಂಬ ತತ್ವವನ್ನು ಮೊದಲು ಫ್ರಾನ್ಸಿನ ತತ್ವಜ್ಞಾನಿಯಾದ ರುಸೋ ಪ್ರತಿಪಾದಿಸಿದನು.

## ಘಟಕ ಪದ್ಧತಿ

- ಡಾ// ಹೆನ್ರಿ. ಸಿ ಮಾರಿಸನ್ ಘಟಕ ಪದ್ಧತಿಯ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ನೀಡಿದರು.

## ಘಟಕ ಯೋಜನೆಯ ಹಂತಗಳು

1. ಉದ್ದೇಶಗಳು
2. ಘಟಕದ ಸಾರ
3. ವಿಷಯ ವಸ್ತು
4. ಚಟುವಟಿಕೆಗಳು
5. ಮೌಲ್ಯಮಾಪನ

KARNATAKA ACADEMY 9980877296

## ಬೋಧನಾ ಉದ್ದೇಶಗಳ ಮೇಲೆ ಕೇಳಿದ / ಕೇಳಬಹುದಾದ ಪ್ರಶ್ನೆಗಳು

- ವಿದ್ಯಾರ್ಥಿಯು ಸಮುದ್ರಗುಪ್ತನ ಸಾಧನೆಯನ್ನು ವಿವರಿಸುವನು ಇತಿಹಾಸದ ಯಾವ ಉದ್ದೇಶಕ್ಕೆ ಸಂಬಂಧಿಸಿದೆ – ತಿಳುವಳಿಕೆ 2014
- ಇತಿಹಾಸ ಶಿಕ್ಷಕರಾಗಿ ನೀವು ಅಶೋಕನ ಸಾಮ್ರಾಟನ ತಂದೆ ಯಾರು ಎಂಬ ಪ್ರಶ್ನೆ ಕೇಳುವುದರ ಮೂಲಕ ಈ ಕೆಳಗಿನ ಯಾವ ಉದ್ದೇಶವನ್ನು ಈಡೇರಿಸುವಿರಿ – ಜ್ಞಾನ 2014
- ವಿದ್ಯಾರ್ಥಿಗಳ ಅನ್ವಯ ಸಾಮರ್ಥ್ಯವನ್ನು ಪರೀಕ್ಷಿಸಲು ಈ ಕೆಳಗಿನ ಯಾವ ಪ್ರಶ್ನೆ ಸಹಾಯಕವಾಗುತ್ತದೆ - ಕಳಿಂಗ ಮಹಾಯುದ್ಧದ ಪರಿಣಾಮ ವಿಶ್ಲೇಷಿಸಿ -2014
- ಈ ಕೆಳಗೆ ಕೊಟ್ಟಿರುವ ಬೋಧನ ಉದ್ದೇಶ ಗಳಲ್ಲಿ ಮನೋ ಚಾಲನ ವಲಯಕ್ಕೆ ಸಂಬಂಧಿಸಿದ ಬೋಧನಾ ಉದ್ದೇಶ – ಕೌಶಲ್ಯ 2014
- ಹೋಲಿಸುವವನು ಮತ್ತು ವ್ಯತ್ಯಾಸಿಸುವವನು ಎಂಬ ನಿರ್ದಿಷ್ಟ ಕಂಡುಬರುವ ಬೋಧನ ಉದ್ದೇಶ – ತಿಳುವಳಿಕೆ 2019

## ನೀವು ತಿಳಿದುಕೊಳ್ಳಲೇಬೇಕಾದ ಮಾಹಿತಿ

- ಬೆಂಜಮಿನ್ ಎಸ್ ಬ್ಲೂಮ್ 1956 - ಮತ್ತು ಅವನ ಸಹೋದ್ಯೋಗಿಗಳು ತಿಳಿಸಿದಂತೆ "ಶೈಕ್ಷಣಿಕ ಉದ್ದೇಶಗಳು ಎಂದರೆ ಕಲಿಕೆಯ ನಂತರ ಕಂಡುಬರುವ ವಿಶಿಷ್ಟ ಬದಲಾವಣೆ, ಅವಶ್ಯಕವಾಗಿ ಆಗಬೇಕಾದ ಬದಲಾವಣೆಗಳು, ಅವರ ವರ್ತನೆ, ವಿಚಾರಧಾರೆ, ಸಾಧನೆ, ಅನಿಸಿಕೆ, ಸ್ವಭಾವ ಮತ್ತು ಸಂಬಂಧಗಳಲ್ಲಿ ಎದ್ದು ಕಾಣಿಸುತ್ತದೆ.

ಬೆಂಜಮಿನ್ ಬ್ಲೂಮ್ ಅವರು ಬೋಧನ ಉದ್ದೇಶ ಗಳನ್ನು ಮೂರು ವಲಯಗಳಾಗಿ ವರ್ಗೀಕರಿಸಿದ್ದಾರೆ.

1. ಜ್ಞಾನಾತ್ಮಕ ವಲಯ
2. ಭಾವನಾತ್ಮಕ ವಲಯ
3. ವನೋ ಕ್ರಿಯಾಜನ್ಯ ವಲಯ

KARNATAKA ACADEMY 9980877296

## ಜ್ಞಾನಾತ್ಮಕ ವಲಯ

ಇದರಲ್ಲಿ ಪ್ರಮುಖವಾಗಿ 6 ವರ್ಗಗಳನ್ನು ಮಾಡಲಾಗಿದೆ ಅವುಗಳೆಂದರೆ,

I. ಜ್ಞಾನ
II. ತಿಳುವಳಿಕೆ
III. ಅನ್ವಯಿಸುವಿಕೆ
IV. ವಿಶ್ಲೇಷಣೆ
V. ಸಂಶ್ಲೇಷಣೆ
VI. ಮೌಲ್ಯಮಾಪನ ( ಎಚ್ಚರಿಕೆ : ಪರಿಷ್ಕೃತ ಪದ್ಧತಿಯ ಪ್ರಕಾರ ಕೇಳಿದರೆ 6ನೇ ಹಂತದಲ್ಲಿ ಸೃಷ್ಟಿಸುವುದು ಬರಬೇಕು)

## ಭಾವನಾತ್ಮಕ ವಲಯ

ಭಾವನಾತ್ಮಕ ವಲಯಕ್ಕೆ ಸಂಬಂಧಿಸಿದ ಉದ್ದೇಶಗಳವರ್ಗೀಕರಣವನ್ನು ಕ್ಯಾಥ್ರೋಲ್ ನಿರೂಪಿಸಿದ್ದಾನೆ. ಇದರಲ್ಲಿ ಪ್ರಮುಖವಾಗಿ 5 ಹಂತಗಳಿವೆ.

I. ಗ್ರಹಿಕೆ
II. ಪ್ರತಿಕ್ರಿಯಿಸುವುದು
III. ಮೌಲ್ಯೀಕರಿಸುವುದು
IV. ಸಂಘಟಿಸುವಿಕೆ
V. ಚಾರಿತ್ರಿಕರಣಗೊಳಿಸುವಿಕೆ (ಎಚ್ಚರಿಕೆ)

KARNATAKA ACADEMY 9980877296

## ಮನೋ ಕ್ರಿಯಾಜನ್ಯವಲಯ

ಮನೋ ಕ್ರಿಯಾಜನ್ಯ ವಲಯಕ್ಕೆ ಸಂಬಂಧಿಸಿದ ಉದ್ದೇಶಗಳ ವರ್ಗೀಕರಣವನ್ನು ಹ್ಯಾರೋ ನಿರೂಪಿಸಿದ್ದಾನೆ. ಈ ವಲಯವು ಆರು ಹಂತಗಳನ್ನು ಒಳಗೊಂಡಿದೆ.

I. ಜ್ಞಾನ
II. ತಿಳುವಳಿಕೆ
III. ಕೌಶಲ್ಯ
IV. ಆಸಕ್ತಿ
V. ಅಭಿವ್ಯಕ್ತಿ
VI. ಮೆಚ್ಚುಗೆ
VII. ಅನ್ವಯ

(ಈಗಾಗಲೇ ನಿರ್ದಿಷ್ಟ ಗಳ ಪಟ್ಟಿಯನ್ನು ಕೊಟ್ಟಿದ್ದು ದಯವಿಟ್ಟು ನೋಡಿಕೊಳ್ಳತಕ್ಕದ್ದು)

ಜ್ಞಾನ, ಅನ್ವಯ ಮತ್ತು ಕೌಶಲ್ಯಗಳನ್ನು ನಿರ್ದಿಷ್ಟ ವಿಷಯದಲ್ಲಿ ಅಥವಾ ಅನೇಕ ವಿಷಯಗಳಲ್ಲಿ ಮಾಪನ ಮಾಡಲು ವಿನ್ಯಾಸಗೊಳಿಸಿರುವ ಪರೀಕ್ಷೆ ಸಾಧನಾ ಪರೀಕ್ಷೆ ಎಂದು ಹೇಳಿದವರು – ಫ್ರೀಮ್ಯಾನ್ **PSY**

ಬ್ಲೂಮನ ಪರಿಷ್ಕೃತ ಬೋಧನಾ ಉದ್ದೇಶದ ವರ್ಗೀಕರಣದ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಯ ಅತ್ಯುನ್ನತ ಹಂತ – ಸೃಷ್ಟಿಸುವುದು **PSY**

## ಪೌರನೀತಿ ಬೋಧನೆಯ ಪದ್ಧತಿಗಳು

- ಸಮೀಕ್ಷಣ ಪದ್ಧತಿ : ಒಂದು ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಅವಶ್ಯಕತೆಗೆ ತಕ್ಕಂತೆ ಗುಂಪುಗಳಲ್ಲಿ ವಿಂಗಡಿಸಿ ಸ್ಥಳೀಯ ಸಂಘ ಸಂಸ್ಥೆಗಳ ಅಥವಾ ಇಡೀ ಊರಿನ ಇಲ್ಲವೇ ಯಾವುದಾದರೂ ಒಂದು ವಿಷಯ ಸಮೀಕ್ಷೆಯನ್ನು ಮಾಡಲು ಹೇಳುವುದು.
- ವೀಕ್ಷಣಾ ಪದ್ಧತಿ – ನಿರ್ದಿಷ್ಟ ಮಾಹಿತಿ ಸಂಗ್ರಹಿಸಲು ಉದ್ದೇಶಪೂರಿತ ನೋಡುವಿಕೆಯನ್ನು ವೀಕ್ಷಣೆ ಎನ್ನುವರು.

KARNATAKA ACADEMY 9980877296

## ಬೋಧನಾ ಮಾದರಿಗಳು

- ಉತ್ತಮ ಬೋಧನಾ ಪದ್ಧತಿಯ ಮತ್ತು ಶಿಕ್ಷಕರ ಕೊರತೆ ಇದ್ದಲ್ಲಿ ಸರ್ವ ದೃಷ್ಟಿಯಿಂದಲೂ ಉತ್ಕೃಷ್ಟ ಎನಿಸುವ ಪಠ್ಯವಸ್ತು ಸಹ ನಿರ್ಜೀವ ಎನಿಸಿಕೊಳ್ಳುತ್ತದೆ - ಲಕ್ಷ್ಮಣರಾವ್ ಮೊದಲಿಯಾರ್ ಆಯೋಗ **1952 -53**
- ಮಾದರಿಗಳ ಮೂಲಕ ಬೋಧನೆ ಎಂದರೆ ಅನುಭವಿಕ ವ್ಯಕ್ತಿಯು ನಿರ್ದಿಷ್ಟವಾದ ಬೋಧನಾ ವಿಧಾನಗಳನ್ನು ಪ್ರದರ್ಶಿಸುತ್ತಾನೆ ಅದನ್ನು ಕಲಿಯುವ ಅನುಕರಣೆಯ ಮೂಲಕ ಕಲಿಯುತ್ತಾನೆ – ಅಲೆನ್ ಮತ್ತು ರೆಯಾನ್

## ಇನ್ನಿತರ ಮಾಹಿತಿಯ ಪ್ರಕ್ರಿಯೆ ಮಾದರಿಗಳು ಮತ್ತು ಪ್ರತಿಪಾದಕರು

1. ಅನುಗಮನ ಚಿಂತನೆ ಮಾದರಿ – ಹಿಲ್ಡಾತಾಬಾ
2. ವಿಚಾರಣಾ ತರಬೇತಿ ಮಾದರಿ ಅಥವಾ ಅನ್ವೇಶಣಾ ಮಾದರಿ - ರಿಚರ್ಡ್ ಸಚ್ ಮನ್
3. ವೈಜ್ಞಾನಿಕ ವಿಚಾರಣೆಯ ಮಾದರಿ ಅಥವಾ ವೈಜ್ಞಾನಿಕ ಅನ್ವೇಷಣ ಮಾದರಿ – ಜೋಸೆಫ್ ಜೆ. ಸ್ಕ್ವಾಬ್
4. ಪರಿಕಲ್ಪನಾ ಸಾಧನೆಯ ಮಾದರಿ – ಬ್ರೂನರ್
5. ಬೌದ್ಧಿಕ ವಿಕಾಸದ ಮಾದರಿ – ಪಿಯಾಜೆ
6. ಮುಂದುವರೆದ ಸಂಘಟನಾ ಮಾದರಿ - ಡೇವಿಡ್ ಅಸುಬೆಲ್
7. ಸ್ಮರಣೆಯ ಮಾದರಿ – ಹ್ಯಾರಿ ಲೊರೆಸ್ ಮತ್ತು ಜೋರಿಲ್ಯೂಕಾಸ್

## ವೈಯಕ್ತಿಕ ವಿಕಾಸ ಮಾದರಿ ಕುಟುಂಬಗಳು ಮತ್ತು ಪ್ರತಿಪಾದಕರು

1. ನಿರ್ದೇಶನ ರಹಿತ ಬೋಧನಾ ಮಾದರಿ – ಕಾರ್ಲ್ ರೋಜರ್ಸ್
2. ಸಿಂಟೆಕ್ಸ್ ಮಾದರಿ – ವಿಲಿಯಂ ಗೋರ್ಡಾನ್
3. ಸ್ವಯಂ ಪ್ರಜ್ಞಾವಂತ ತರಬೇತಿ ಮಾದರಿ – ಬ್ರೌನ್, ಪರ್ಲಸ್
4. ಪರಿಕಲ್ಪನಾತ್ಮಕ ವ್ಯವಸ್ಥಾ ಮಾದರಿ - ಡೇವಿಡ್ ಹಂಡ್
5. ವರ್ಗಕೋಣೆಯ ಗುಂಪು ಸಲಹಾ ಮಾದರಿ - ವಿಲಿಯಂ ಗ್ಲೆಸರ್

KARNATAKA ACADEMY 9980877296

## ದೃಕ್ ಶ್ರವಣ ಉಪಕರಣಗಳು

- ಇತ್ತೀಚಿನ ವಿದ್ಯಮಾನಗಳನ್ನು ಪ್ರದರ್ಶಿಸಲು ಬಳಸುವ ಸಾಧನ - ಬುಲೆಟಿನ್ ಬೋರ್ಡ್ ಅಥವಾ ವಾರ್ತಾ ಫಲಕ 2019
- ದೃಶ್ಯ-ಶ್ರವಣ ಉಪಕರಣಗಳಿಂದ ತರಗತಿಯಲ್ಲಿ ಶಿಕ್ಷಕನ ಶ್ರಮ – ಕಡಿಮೆಯಾಗುತ್ತದೆ
- ಇತಿಹಾಸ ಕೊಠಡಿಯ ಒಂದು ಭಾಗದಲ್ಲಿ ಈ ಕೆಳಗಿನ ಯಾವ ವಿಭಾಗವನ್ನು ಸ್ಥಾಪಿಸಬೇಕು - ವಸ್ತುಸಂಗ್ರಹಾಲಯ
- ಬೋಧನೋಪಕರಣ ಗಳಿಗೆ ಸಂಬಂಧಿಸಿದಂತೆ ಸಿ.ಎಲ್ ಬಲ್ಲಾರ್ಡ್ ರವರು ಮಂಡಿಸಿದ ತ್ರಿಕೋನ ಪ್ರಕ್ರಿಯೆಯಲ್ಲಿ ಈ ಕೆಳಗಿನ ಯಾವ ಅಂಶ ಕಂಡುಬರುವುದಿಲ್ಲ – ಮೌಲ್ಯಮಾಪನ (ಅಭಿಪ್ರೇರಣೆ, ಪ್ರಚೋದನೆ, ಸ್ಪಷ್ಟೀಕರಣ ಅವರು ಹೇಳಿದ್ದು)
- ಪ್ರಕ್ಷೇಪಿತ ಸಲಕರಣೆಗಳಿಗೆ ಉದಾಹರಣೆ – ಸ್ಲೈಡ್
- ಗಣಕಯಂತ್ರ ಆಧಾರಿತ ಸಮಾಜ-ವಿಜ್ಞಾನ ಬೋಧನೆಯನ್ನು ಮಾಡುವಾಗ ಶಿಕ್ಷಕನ ಪಾತ್ರ – ಸ್ನೇಹಿತ
- ಮೌರ್ಯ ಸಾಮ್ರಾಜ್ಯದ ಬೋಧನೆ ನಂತರ ಯಶಸ್ವಿಯಾಗಿ ಮೌಲ್ಯಮಾಪನ ಮಾಡಲು ಯಾವ ಬೋಧನೋಪಕರಣ ಬಳಸುವಿರಿ - ಸ್ವಾತಂತ್ರ್ಯ ಪೂರ್ವ ಭಾರತದ ಭೂಪಟ

## ಬೋಧನಾ ಹಂತಗಳು 2017

1. ಬೋಧನ ಉದ್ದೇಶ ಗಳನ್ನು ರಚಿಸುವುದು
2. ಪ್ರಸ್ತುತ ಜ್ಞಾನವನ್ನು ಪೂರ್ವ ಜ್ಞಾನಕ್ಕೆ ಹೊಂದಿಸುವುದು
3. ಬೋಧನಾ ಸಾಮಗ್ರಿಗಳನ್ನು ಪ್ರಸ್ತುತಪಡಿಸುವಿಕೆ
4. ಮೌಲ್ಯಮಾಪನ

## ಪಾಠಯೋಜನೆಯ ಅರ್ಥ - ಬೋಧನೆಯ ಪೂರ್ವಸಿದ್ಧತೆ

ಪಾಠ ಯೋಜನೆ ಒಂದು ಕ್ರಿಯಾಯೋಜನೆ ಯಾಗಿದೆ ಎಂದವರು – ಎಲ್. ಬಿ. ಸ್ಟ್ಯಾಂಡ್

ಅಣು ಬೋಧನೆಯ ಮುಖ್ಯ ಉದ್ದೇಶ - ಬೋಧನೆಯಲ್ಲಿ ಇರುವ ಕ್ಲಿಷ್ಟತೆಯನ್ನು ನಿವಾರಿಸುವುದು

ಪಠ್ಯವಸ್ತು ಎಂದರೆ ಶಾಲೆಯಲ್ಲಿ ಮಗು ಪಡೆಯುವ ಒಟ್ಟು ಅನುಭವದ ಮೊತ್ತ ಎಂದು ಹೇಳಿದವರು - ರಾಷ್ಟ್ರೀಯ ಶಿಕ್ಷಣ ನೀತಿ



KARNATAKA ACADEMY 9980877296

ಬೋಧನೆಯಲ್ಲಿ ಪಾಠೋಪಕರಣಗಳ ಬಳಕೆಯು ಈ ತತ್ವದ ಆಧಾರದ ಮೇಲೆ – ಮನಶಾಸ್ತ್ರ

ಶೈಕ್ಷಣಿಕ ಚಟುವಟಿಕೆಯ ಮೂಲಕ ಅರ್ಥ - ಉದ್ದೇಶ ಆಧಾರಿತ ಕಾರ್ಯ

ಸಮಾಜ ವಿಜ್ಞಾನ ಬೋಧನೆ ಗೆ ಸಂಬಂಧಿಸಿದ ಮುಖ್ಯ ಅಂಶಗಳನ್ನು ಈ ಮೂಲಾಧಾರದಿಂದ ಪಡೆಯಬಹುದು - ಮೂಲ ಶಿಕ್ಷಣ ಪದ್ಧತಿ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 - ಪ್ರಕಾರ ಸಮಾಜ ವಿಜ್ಞಾನ ಬೋಧನೆಯ ಮುಖ್ಯ ಆದ್ಯತೆ - ಸಮಾಜ ವಿಜ್ಞಾನ ಬೋಧನೆ ಮೂಲಕ ನೈತಿಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದು.

ಪ್ರಚಲಿತ ವಿದ್ಯಮಾನಗಳನ್ನು ತರಗತಿಗಳಲ್ಲಿ ಚರ್ಚಿಸಲೇ ಬೇಕು - ಇದು ಪ್ರಚಲಿತ ಸಮಸ್ಯೆಗಳ ನಿವಾರಣೆಗೆ ಸ್ಪಂದಿಸುವ ಮನೋಭಾವ ಬೆಳೆಸುತ್ತದೆ

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

- ನಿರಂತರ ವ್ಯಾಪಕ ಮೌಲ್ಯಮಾಪನ ಎಂದರೆ - ಮಗುವಿನ ಸರ್ವತೋಮುಖ ಬೆಳವಣಿಗೆಯ ಮಾಪನ.
- ಸಮಾಜ ವಿಜ್ಞಾನ ಮೌಲ್ಯಮಾಪನದಲ್ಲಿ ಶ್ರೇಣಿ ವ್ಯವಸ್ಥೆಯನ್ನು ಜಾರಿಗೆ ತಂದ ವಿನೂತನ ಕಾರ್ಯಕ್ರಮ - ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಪದ್ಧತಿ
- ಸಮಾಜ ವಿಜ್ಞಾನ ತರಗತಿಯಲ್ಲಿ ನಡೆಯುವ ಮೌಲ್ಯಮಾಪನವು ಹೀಗಿರಬೇಕು - ಸಾಮರ್ಥ್ಯ ಆಧಾರಿತ ವಾಗಿರಬೇಕು
- ಸಮಾಜ ವಿಜ್ಞಾನ ಬೋಧನೆ ಇಂದ ಮಕ್ಕಳಲ್ಲಿ ಬೆಳೆಸಬಹುದಾದ ಮುಖ್ಯ ಸಾಮರ್ಥ್ಯ - ವಿಮರ್ಶಾತ್ಮಕ ಚಿಂತನೆ
- ಭೂಗೋಳಶಾಸ್ತ್ರ ಬೋಧನೆಗೆ ಒಂದು ಪ್ರತ್ಯೇಕ ಭೂಗೋಳ ಪ್ರಯೋಗಶಾಲೆ ಅವಶ್ಯಕತೆ ಇದೆ ಏಕೆಂದರೆ – ಭೂಗೋಳ ಶಾಸ್ತ್ರದ ಕಲಿಕೆಯನ್ನು ಹೆಚ್ಚು ನೈಜ ಗೊಳಿಸಲು
- ಈ ಕೆಳಗಿನ ಯಾವ ಅಂಶವು ರಚನಾತ್ಮಕ ಕಲಿಕಾ ಸನ್ನಿವೇಶದ ಭಾಗವಾಗಿದೆ – ಬಹುಮುಖಿ ಪ್ರದರ್ಶನ.
- ಕಲಿಕಾ ಅನುಭವಗಳನ್ನು ರಚಿಸುವಾಗ ಗಮನಿಸುವ ದೃಷ್ಟಿಕೋನ - ವಿಷಯ ಮತ್ತು ವಿದ್ಯಾರ್ಥಿ
- ರಾಷ್ಟ್ರೀಯ ಭಾವೈಕ್ಯತೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಹಾಯಕವಾಗುವ ವಿಷಯ - ಇತಿಹಾಸ



CONTACT FOR ONLINE COACHING CLASSES KARNATAKA ACADEMY 9980877296

- ಸಮಾಜ ವಿಜ್ಞಾನ ವಿಷಯವನ್ನು ನಿರಂತರ ವೃತ್ತವಾಗಿ ವ್ಯವಸ್ಥೆಗೊಳಿಸುವ ವ್ಯವಸ್ಥೆ – ಏಕ ಕೇಂದ್ರಿತ ಮಾರ್ಗ
- ಮಕ್ಕಳ ಬೌದ್ಧಿಕ, ದೈಹಿಕ, ಸಾಮಾಜಿಕ ಅಭಿವೃದ್ಧಿ, ಅಭಿರುಚಿ,ಅರ್ಹತೆ ಮತ್ತು ಒಲವು ಮುಂತಾದವುಗಳನ್ನು ಒಟ್ಟಾರೆಯಾಗಿ ಅಳೆಯುವ ಪ್ರಕ್ರಿಯೆ ಮೌಲ್ಯಮಾಪನ ಎಂದು ಹೇಳಿದವರು -ರೈಲೆನ್ ಮತ್ತು ಹುನ್ನಾರ
- ಒಂದು ಶೈಕ್ಷಣಿಕ ವರ್ಷದಲ್ಲಿ ನಿರಂತರವಾಗಿ ವಿದ್ಯಾರ್ಥಿಗಳ ಕಲಿಕೆಯ ಸಾಧನೆಯನ್ನು ಗುರುತಿಸುವ ಮೌಲ್ಯಮಾಪನ - ರಚನಾತ್ಮಕ ಮೌಲ್ಯಮಾಪನ
- ಪ್ರಮಾಣಿಕೃತ ಪರೀಕ್ಷೆಯ ವೈಶಿಷ್ಟಗಳು
    1. ಇವು ಪರಿಣತರಿಂದ ರಚಿಸಲ್ಪಟ್ಟ ಪರೀಕ್ಷಣಗಳು
    2. ಯು ಉತ್ತಮ ಗುಣಮಟ್ಟದ ತಾಂತ್ರಿಕತೆಯನ್ನು ಹೊಂದಿದೆ ಹಾಗೂ ಸುಧಾರಿತ ಪರೀಕ್ಷೆ ಗಳಾಗಿವೆ.
- ಮೌಲ್ಯಮಾಪನವು ಋಣಾತ್ಮಕ ಕ್ರಿಯೆ ಆಗಿರದೆ ಧನಾತ್ಮಕ ಪ್ರಕ್ರಿಯೆಯಾಗಿದೆ ಎಂದು ಹೇಳಿದವರು - ಜೇಮ್ಸ್ ಲಿ

## ಪರೀಕ್ಷೆಯ ಗುಣಲಕ್ಷಣಗಳು

- ಒಂದು ಸಾಧನ ಯಾವುದೇ ಒಂದು ನಿರ್ದಿಷ್ಟ ಮೌಲ್ಯವನ್ನು ಯಾರೇ ಆಗಲಿ ಎಷ್ಟು ಬಾರಿ ನಿರ್ಧರಿಸಿದರೂ ಕೂಡ ಒಂದೇ ಆಗಿದ್ದರೆ ಅದನ್ನು - ವಿಶ್ವಸನೀಯತೆ ಎನ್ನುವರು
- ಒಂದು ಪರೀಕ್ಷೆಯು ಯಾವುದನ್ನು ಅಳೆಯಬೇಕಾಗಿದೆಯೋ ಅದನ್ನು ಅಳೆದರೆ - ಸಮಂಜಸತೆ

ಯಾವುದೇ ಪರೀಕ್ಷೆಯನ್ನು ಎಷ್ಟೇ ವ್ಯಕ್ತಿಗಳಿಗೆ ಕೇಳಿದಾಗ ಒಂದೇ ಉತ್ತರ ಆಗಿರಬೇಕು ನಿಖರವಾಗಿರಬೇಕು ಆಗ ಅದು - ವಸ್ತುನಿಷ್ಠತೆ ಎನಿಸಿಕೊಳ್ಳುತ್ತದೆ.

- ಕ್ಷೇತ್ರ ಪ್ರವಾಸ ಅಥವಾ ಹೊರ ಸಂಚಾರದ ಮೇಲೆ ಅನ್ವಯಿಕ ಪ್ರಶ್ನೆಗಳನ್ನು ಕೇಳಲಾಗುತ್ತದೆ.
- ಅನುಭವ ಶಂಕು ನೀಡಿದವರು - ಎಡ್ಗರ್ ಡೇಲ್
- ಅನುಭವ ಶಂಕು ಮೂರ್ತದಿಂದ ಅಮೂರ್ತದ ಕಡೆಗೆ ಸಾಗುತ್ತದೆ.



KARNATAKA ACADEMY 9980877296

## ಘಟಕ ಪರೀಕ್ಷೆಯ ಹಂತಗಳು

1. ಪರೀಕ್ಷೆಯ ಯೋಜನೆ
2. ಪರೀಕ್ಷೆಯ ಅಂಶಗಳನ್ನು ಬರೆಯುವುದು
3. ಪರೀಕ್ಷಾ ಅಂಶಗಳನ್ನು ವ್ಯವಸ್ಥೆಗೊಳಿಸುವುದು
4. ಸೂಕ್ತ ನಿರ್ದೇಶನಗಳನ್ನು ನೀಡುವುದು
5. ಗುಣಗಳನ್ನು ನೀಡುವ ಮತ್ತು ಗುರುತಿ ಪದ್ಧತಿ ಯೋಜನೆ ರೂಪಿಸುವುದು
6. ಪುನರಾವಲೋಕನ ಮತ್ತು ಸಂಪಾದಕೀಯ

## ಘಟಕ ಯೋಜನೆಯ ಹಂತಗಳು

1. ಘಟಕದ ಶಿರೋನಾಮೆ
2. ತರಗತಿ, ಉಪ ಘಟಕಗಳ ಸಂಖ್ಯೆ ಮತ್ತು ಅವಧಿಗಳ ಸಂಖ್ಯೆ
3. ಘಟಕದ ಮಹತ್ವ ಮತ್ತು ವ್ಯಾಪ್ತಿ
4. ಪ್ರಧಾನ ಪರಿಕಲ್ಪನೆ ಮತ್ತು ಸಾಮಾನ್ಯ ಕರಣಗಳು
5. ಬೋಧನಾ ಉದ್ದೇಶಗಳು
6. ಪೀಠಿಕೆಯ ಚಟುವಟಿಕೆಗಳು
7. ಬೆಳವಣಿಗೆ
8. ಪುನರಾವಲೋಕನ
9. ಮೌಲ್ಯಮಾಪನ
10. ಸಲಹಾ ಚಟುವಟಿಕೆಗಳು
11. ಪರಾಮರ್ಶನ ಸಾಮಾಗ್ರಿಗಳು

## ಪಾಠ ಯೋಜನೆ

- ಪಾಠ ಯೋಜನೆಯು ನಿರ್ದಿಷ್ಟ ಹಾಗೂ ಸಾಮಾನ್ಯ ಉದ್ದೇಶ ಗಳನ್ನು ಒಳಗೊಂಡ ಸುಸಂಘಟಿತ ಹೇಳಿಕೆ – ಎನ್.ಎಲ್.ಬಾಸಿಂಗ್


CONTACT FOR ONLINE COACHING CLASSES KARNATAKA ACADEMY 9980877296
KARNATAKA ACADEMY 9980877296

## ಪಾಠ ಯೋಜನೆ ಹಂತಗಳು

1. ಪೂರ್ವ ಸಿದ್ಧತಾ ಹಂತ
2. ಕಲಿಕಾ ಪೂರಕ ಹಂತ
3. ಕಲಿಕಾಂಶದ ಹಂತ
4. ಅಭ್ಯಾಸದ ಹಂತ
5. ಅನ್ವಯದ ಹಂತ
6. ಮೌಲ್ಯಮಾಪನ ಹಂತ

## ಸಾಮರ್ಥ್ಯ ಆಧಾರಿತ ಬೋಧನೆ ಅಥವಾ ಚೈತನ್ಯ ಮಾದರಿ

ಕಲಿಕೆಯ ಕನಿಷ್ಠ ಮಟ್ಟಗಳ ಹಿನ್ನೆಲೆಯಲ್ಲಿ ಸಾಮರ್ಥ್ಯಗಳು ಕಲಿಕಾ ಉದ್ದೇಶಗಳಾಗಿವೆ ವಿದ್ಯಾರ್ಥಿಯಲ್ಲಿ ಒಂದು ನಿರ್ದಿಷ್ಟವಾದ ಸಾಮರ್ಥ್ಯವನ್ನು ಬೆಳೆಸಿದರೆ ಸಾಮರ್ಥ್ಯಕ್ಕೆ ಸಂಬಂಧಿಸಿದ ಕೆಲಸವನ್ನು ಮಾಡುವ ಸಾಮರ್ಥ್ಯ ಇರಬೇಕಾಗುತ್ತದೆ.

ಕೆಲವು ಪ್ರಶ್ನೆಗಳನ್ನು ನೇರವಾಗಿ ಅನ್ವಯಿಕ ವಾಗಿ ಕೇಳುತ್ತಾನೆ ಆಗ ಶಾಂತಚಿತ್ತದಿಂದ ಪ್ರಶ್ನೆಗಳಿಗೆ ಉತ್ತರಿಸಬೇಕು.

## ಚೈತನ್ಯ ಮಾದರಿಯ ಹಂತಗಳು

1. ಪೂರ್ವ ಸಿದ್ಧತಾ ಚಟುವಟಿಕೆಗಳು
2. ಕಲಿಕಾ ಪೂರ್ವ ಚಟುವಟಿಕೆಗಳು
3. ಕಲಿಕೆಯ ಚಟುವಟಿಕೆಗಳು
4. ಅಭ್ಯಾಸ ಅಥವಾ ಪುನರ್ಬಲನ ಚಟುವಟಿಕೆಗಳು
5. ಬಳಕೆ ಅಥವಾ ಅನ್ವಯಿಕ ಚಟುವಟಿಕೆಗಳು
6. ಮೌಲ್ಯಮಾಪನ ಚಟುವಟಿಕೆಗಳು

## ಉನ್ನತ ಹಂತಗಳಿಗೆ

1. ಪೂರ್ವಸಿದ್ಧತೆ ಮತ್ತು ಕಲಿಕೆ ಪೂರ್ವ ಚಟುವಟಿಕೆಗಳು
2. ಕಲಿಕೆಯ ಚಟುವಟಿಕೆಗಳು

KARNATAKA ACADEMY 9980877296

3. ಅಭ್ಯಾಸ ಮತ್ತು ಬಳಕೆಯ ಚಟುವಟಿಕೆಗಳು
4. ಮೌಲ್ಯಮಾಪನ ಚಟುವಟಿಕೆಗಳು

## ಭೂಗೋಳ ಬೋಧನಾ ವಿಧಾನಗಳು

1. ಪ್ರಯೋಗಾಲಯ ವಿಧಾನ
2. ಹೋಲಿಕಾ ವಿಧಾನ
3. ಪರಿಸರ ಅಧ್ಯಯನ ಕ್ರಮ

## ಸಮಾಜ ವಿಜ್ಞಾನ ಪಠ್ಯಪುಸ್ತಕ

- ರಾಂಡಮ್ ಹೌಸ್ ವಿಶ್ವಕೋಶದ ಪ್ರಕಾರ - ಪಠ್ಯಪುಸ್ತಕ ಎಂದರೆ ಒಂದು ನಿರ್ದಿಷ್ಟ ವಿಷಯದ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ಉಪಯೋಗಿಸುವಂತಹ ಉತ್ತಮ ಗುಣಮಟ್ಟದ ಪುಸ್ತಕ.
- ಪಠ್ಯಪುಸ್ತಕವೂ ಬೋಧನೆಯ ಅರ್ಧ ಸಾಮಗ್ರಿ ಇದ್ದಂತೆ – ರೇಟಿಂಗ್

## ಸಮಾಜ ವಿಜ್ಞಾನ ಪಠ್ಯಪುಸ್ತಕದ ಗುಣಲಕ್ಷಣಗಳು

1. ಪಠ್ಯಪುಸ್ತಕ ಬೋಧನಾ ಗುರಿ ಉದ್ದೇಶಗಳಿಗೆ ಅನುಗುಣವಾಗಿರಬೇಕು
2. ಪಠ್ಯಪುಸ್ತಕದ ಭಾಷೆ ಸರಳವಾಗಿರಬೇಕು ಮತ್ತು ಸ್ಪಷ್ಟವಾಗಿರಬೇಕು
3. ವಿದ್ಯಾರ್ಥಿಗಳ ಆಸಕ್ತಿ, ಪರಿಪಕ್ವತೆ ಮಟ್ಟ ಮತ್ತು ಅಗತ್ಯತೆಗಳಿಗೆ ಅನುಗುಣವಾಗಿರಬೇಕು
4. ಪಠ್ಯಪುಸ್ತಕ ಸಮಾಜ ದೃಷ್ಟಾಂತಗಳನ್ನು ಒಳಗೊಂಡಿರಬೇಕು
5. ವಿಷಯ ಅನುಕ್ರಮವಾಗಿ ಇರಬೇಕು
6. ಪಠ್ಯಪುಸ್ತಕದಲ್ಲಿನ ವಿಷಯಗಳು ಪೂರ್ವಗ್ರಹಗಳಿಂದ ದೂರವಿರಬೇಕು
7. ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಂತಿರಬೇಕು
8. ಅಂತರಾಷ್ಟ್ರೀಯ ತಿಳುವಳಿಕೆಯನ್ನು ಮೂಡಿಸುವಂತಿರಬೇಕು
9. ಪಠ್ಯಪುಸ್ತಕವು ವಿವರವಾದ ಮಾಹಿತಿಯನ್ನು ಒಳಗೊಂಡಿರಬೇಕು
10. ಪಠ್ಯಪುಸ್ತಕವು ವೈಜ್ಞಾನಿಕ ಮಾಹಿತಿಯನ್ನು ಒಳಗೊಂಡಿರಬೇಕು
11. ಉತ್ತಮ ಉದಾಹರಣೆಗಳು ಸಹಸಂಬಂಧ ಹೊಂದಿರಬೇಕು
12. ಪಠ್ಯಪುಸ್ತಕವೂ ಸ್ವ ವಿವರಣಾತ್ಮಕ ವಾಗಿದ್ದು ಸ್ವ ಕಲಿಕೆಗೆ ಅವಕಾಶ ಇರಬೇಕು
13. ಪಠ್ಯಪುಸ್ತಕವು ಸತತವಾಗಿ ಪರಿಷ್ಕರಿಸಬೇಕು



KARNATAKA ACADEMY 9980877296

**14.ಪಠ್ಯಪುಸ್ತಕವೂ ಮನೋವೈಜ್ಞಾನಿಕ ತತ್ವದ ಆಧಾರದ ಮೇಲೆ ರಚಿತವಾದ ಬೇಕು**

**15.ಸಾಕಷ್ಟು ಬೋಧನೋಪಕರಣಗಳನ್ನು ಬಳಸಲು ಅವಕಾಶ ಇರಬೇಕು**

**ಅಟ್ಲಾಸ್**

- **ಶಾಲೆಯ ಸಮಾಜವಿಜ್ಞಾನದ ಬೋಧನೆಯಲ್ಲಿ ಅಟ್ಲಾಸ್ ಒಂದು ಉಪಯುಕ್ತ ಬೋಧನಾ ಸಾಧನ.**
- **ಅಟ್ಲಾಸ್ ಎಂದರೆ ಭೂಪಟಗಳ ಸಂಗ್ರಹಾಲಯ.**

**ಭೇಟಿ ಮತ್ತು ಪ್ರವಾಸದ ಸಂಘಟನೆ**

1. **ಪೂರ್ವ ಸಿದ್ಧತೆ**
2. **ಯೋಜನೆ**
3. **ಕಾರ್ಯಾಚರಣೆ**
4. **ಮೌಲ್ಯಮಾಪನ ಮತ್ತು ದಾಖಲಿಸುವುದು**

**ರಚನಾತ್ಮಕ ಬೋಧನಾ ವಿಧಾನ ಎಂದರೆ - ವಿದ್ಯಾರ್ಥಿಗಳ ಪೂರ್ವ ಜ್ಞಾನದ ಮೇಲೆ ಆಧಾರಿತವಾದ ವಿಧಾನ.**



KARNATAKA ACADEMY 9980877296